ಸಾಕ್ಷಿಯನ್ನು ಕರೆಸಿ ದಿನಾಂಕಃ 20-02-2021 ರಂದು ಪ್ರಮಾಣೀಕರಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಃ ಶ್ರೀ ಎಂಎಲ್‌ವಿ  ವಕೀಲರಿಂದಃ

ದಿಃ 16-05-2017ರಂದು ಪ್ರತಿವಾದಿ ನಂ. 1 ರಿಂದ 5 ಇವರು ಬರೆದುಕೊಟ್ಟ ಮೂಲ ಕ್ರಯದ ಕರಾರನ್ನು ಹಾಜರುಪಡಿಸಿರುತ್ತೇನೆ ಅದನ್ನು ಪ್ರತಿವಾದಿಪರ ವಕೀಲರ ತಕರಾರಿಗೆ ಒಳಪಟ್ಟು ನಿಪಿ 1 ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ರೆಡ್ಡಪ್ಪ ಮತ್ತು ಮಂಜುನಾಥ ಎನ್ನುವವರು ಸಾಕ್ಷಿದಾರರಾಗಿದ್ದು , ಅದನ್ನು ಬರೆದವರು ಗುಣಶಂಕರ್ ಬರಹಗಾರರು. ನಿಪಿ 1ರಲ್ಲಿಯ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. 1 ರಿಂದ 5ನೇ ಪ್ರತಿವಾದಿಯರು ನಿಪಿ 1ಕ್ಕೆ  ನಾಲ್ಕು ಕಡೆ ಸಹಿ ಹಾಕಿದ್ದು ಒಂದನೇ ಪುಟದಲ್ಲಿರುವ ಅವರ ಸಹಿಗಳ ಪೈಕಿ ಪ್ರತಿವಾದಿ ನಂ. 1

ಮತ್ತು 3 ರಿಂದ 5 ಇವರ ಸಹಿಗಳನ್ನು ಮತ್ತು ಪ್ರತಿವಾದಿ ನಂ. 2 ಇವರ ಹೆಬ್ಬೆಟ್ಟಿನ ಗುರುತನ್ನು ಕ್ರಮವಾಗಿ ನಿಪಿ 1(ಬಿ ಯಿಂದ ಎಫ್) ಎಂದು ಗುರುತಿಸಲಾಯಿತು. 1 ರಿಂದ 5ನೇ ಪ್ರತಿವಾದಿಯರು ನಿಪಿ 1ಕ್ಕೆ ನಾಲ್ಕು ಕಡೆ ಸಹಿ ಹಾಕಿದ್ದು ಎರಡನೇ ಪುಟದಲ್ಲಿರುವ ಅವರ ಸಹಿಗಳ ಪೈಕಿ ಪ್ರತಿವಾದಿ ನಂ. 1 ಮತ್ತು 3 ರಿಂದ 5 ಇವರ ಸಹಿಗಳನ್ನು ಮತ್ತು ಪ್ರತಿವಾದಿ ನಂ. 2 ಇವರ ಹೆಬ್ಬೆಟ್ಟಿನ ಗುರುತನ್ನು ಕ್ರಮವಾಗಿ ನಿಪಿ 1(ಜಿ ಯಿಂದ ಕೆ) ಎಂದು ಗುರುತಿಸಲಾಯಿತು. 1 ರಿಂದ 5ನೇ ಪ್ರತಿವಾದಿಯರು ನಿಪಿ 1ಕ್ಕೆ ನಾಲ್ಕು ಕಡೆ ಸಹಿ ಹಾಕಿದ್ದು ಮೂರನೇ ಪುಟದಲ್ಲಿರುವ ಅವರ ಸಹಿಗಳ ಪೈಕಿ ಪ್ರತಿವಾದಿ ನಂ. 1 ಮತ್ತು 3 ರಿಂದ 5 ಇವರ ಸಹಿಗಳನ್ನು ಮತ್ತು ಪ್ರತಿವಾದಿ ನಂ. 2 ಇವರ ಹೆಬ್ಬೆಟ್ಟಿನ ಗುರುತನ್ನು ಕ್ರಮವಾಗಿ ನಿಪಿ 1(ಎಲ್ ಯಿಂದ ಪಿ) ಎಂದು ಗುರುತಿಸಲಾಯಿತು. 1 ರಿಂದ 5ನೇ ಪ್ರತಿವಾದಿಯರು ನಿಪಿ 1ಕ್ಕೆ ನಾಲ್ಕು ಕಡೆ ಸಹಿ ಹಾಕಿದ್ದು ನಾಲ್ಕನೇ ಪುಟದಲ್ಲಿರುವ ಅವರ ಸಹಿಗಳ ಪೈಕಿ ಪ್ರತಿವಾದಿ ನಂ. 1 ಮತ್ತು 3 ರಿಂದ 5 ಇವರ ಸಹಿಗಳನ್ನು ಮತ್ತು ಪ್ರತಿವಾದಿ ನಂ. 2 ಇವರ ಹೆಬ್ಬೆಟ್ಟಿನ ಗುರುತನ್ನು ಕ್ರಮವಾಗಿ ನಿಪಿ 1(ಕ್ಯೂ ಯಿಂದ ಯು) ಎಂದು ಗುರುತಿಸಲಾಯಿತು. ದಾವಾ ಆಸ್ತಿಗೆ ಸಂಬಂಧಿಸಿದಂತೆ 2019-20ನೇ ಸಾಲಿನ ಗೇಣಿ ಮತ್ತು ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ 2 ಎಂದು ಗುರುತಿಸಲಾಯಿತು. ಎಂಆರ್ ನಂ.ಹೆಚ್ 10 ನೇದ್ದರ ಪ್ರತಿಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ 3 ಎಂದು ಗುರುತಿಸಲಾಯಿತು. ದಾವಾ ಆಸ್ತಿಗೆ ಸಂಬಂಧಿಸಿದಂತೆ ಋಣಬಾರ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ 4 ಎಂದು ಗುರುತಿಸಲಾಯಿತು. ದಿಃ 08-12-1975ರಂದು ಬರೆಯಲಾದ ಕ್ರಯ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ 5 ಎಂದು ಗುರುತಿಸಲಾಯಿತು. ದಿಃ 15-07-2017ರಂದು ನನ್ನ ಪರ ವಕೀಲರಮೂಖಾಂತರ ಪ್ರತಿವಾದಿಯರಿಗೆ ಕಳುಹಿಸಿದ ನೋಟೀಸಿನ ಕಚೇರಿ ಪ್ರತಿಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ 6 ಎಂದು ಗುರುತಿಸಲಾಯಿತು. ಐದು ಅಂಚೆ

ರಶೀದಿಗಳನ್ನು ನಿಪಿ 7 ರಿಂದ 11 ಎಂದು ಗುರುತಿಸಲಾಯಿತು. ಸದರಿ ನೋಟೀಸು ಪ್ರತಿವಾದಿ ನಂ. 1 ಮತ್ತು 2 ಇವರಿಗೆ ತಲುಪಿದ ಕುರಿತು ಎರಡುಅಂಚೆ ಸ್ವೀಕೃತಿ ಪತ್ರಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ 12 ಮತ್ತು 13 ಎಂದು ಗುರುತಿಸಲಾಯಿತು. ಪ್ರತಿವಾದಿ ನಂ. 3 ರಿಂದ 5 ಇವರಿಗೆ ಕಳುಹಿಸಿದ ನೋಟೀಸು ಮರಳಿ ಬಂದ ಅಂಚೆ ಲಕೋಟೆಗಳನ್ನು ಕ್ರಮವಾಗಿ ನಿಪಿ 14 ರಿಂದ 16 ಎಂದು ಅವುಗಳನ್ನು ತೆರೆಯಲಾಗಿ ಅವುಗಳಲ್ಲಿರುವ ನೋಟೀಸಿನ ಪ್ರತಿಗಳನ್ನು ನಿಪಿ 14(ಎ) ರಿಂದ 16(ಎ) ಎಂದು ಗುರುತಿಸಲಾಯಿತು.

ಪಾಟಿ ಸವಾಲುಃ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)

ಓಹೇಕೇ ಸರಿಯಿದೆ

(ಹಾಜಿಹುಸೇನಸಾಬ ಯಾದವಾಡ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ,ಮುಳಬಾಗಿಲು.